

# ದೇವರ ಕಾರ್ಯಗಳಿಗೆ ತಮ್ಮನ್ನೇ ಸಮರ್ಪಿಸಿಕೊಳ್ಳುವವರು ಧನ್ಯರು.

ಯುರೋಪಿನ ಹೃದಯ ಭಾಗದಿಂದ ಪ್ರಾರಂಭಿತಗೊಂಡು, ಪ್ರಪಂಚದ ಮೂಲೆ ಮೂಲೆಗಳಿಗೂ ವ್ಯಾಪಿಸುವುದರ ಮೂಲಕ, ಇಂದು ಐದು ಖಂಡಗಳಲ್ಲಿ, ಐವತ್ತೆರಡು ದೇಶಗಳಲ್ಲಿ ತನ್ನ ಸಂಸ್ಥೆಗಳೊಂದಿಗೆ ಕಾರ್ಯನಿರ್ವಹಿಸುತ್ತಿರುವ ಅಂತಾರಾಷ್ಟ್ರೀಯ ಸಭೆಯಾಗಿ ಬೆಳೆದು ನಿಂತಿದೆ. 1933 ರಿಂದ ಭಾರತದ ಸಮಾಜದಲ್ಲಿ ಉದ್ಭವವಾಗುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಜನರಲ್ಲಿ ಅರಿವು ಮೂಡಿಸಲು ತನ್ನ 60 ಸಮುದಾಯಗಳೊಂದಿಗೆ 19 ರಾಜ್ಯಗಳಲ್ಲಿ ಪ್ರಯತ್ನಿಸುತ್ತಿದೆ.




**Discover the calling to SSpS**













## ಪ್ರೀತಿಯ ಕರೆಯೋಲೆ

ಈ ಪ್ರಪಂಚದಲ್ಲಿ ನಮ್ಮ ಜೀವನ ದೇವರು ಇರುವಿಕೆಯ ಮುಂದುವರಿದ ಭಾಗ. ಆದ್ದರಿಂದ ನಮ್ಮ ಪ್ರಸನ್ನತೆ ದೇವರ ಪ್ರಸನ್ನತೆಯ ಮುಂದುವರಿದ ಭಾಗವಾಗಬೇಕು. ಈ ನಿಟ್ಟಿನಲ್ಲಿ ನಮ್ಮ ಮತ್ತು ನಿಮ್ಮೆಲ್ಲರ ಕರ್ತವ್ಯವೇನೆಂದರೆ ದೇವರನ್ನು ನಮ್ಮ ಜೀವನದಲ್ಲಿ ಪುನ: ಕರೆ ತರುವುದಾಗಿದೆ. ಈ ಹಾದಿಯನ್ನು ಸರಾಗಮಾಡಲು, ಜನರಿಗೆ ದೇವರ ಕರುಣೆಯ ಮುಖ ಪರಿಚಯ ಮಾಡಿಸುವುದು ಸೂಕ್ತ.

ನಿಮ್ಮ ಹೃದಯಗಳು ದೇವರ ಕರೆಯಲ್ಲಿ ಮಿಡಿಯುತ್ತಿದ್ದರೆ ಭಯ ಪಡಬೇಡಿ!
ದೇವರ ಪ್ರೀತಿಯನ್ನು ಸಾರುವ ರಾಯಭಾರಿಗಳಾಗಲು, ನಮ್ಮ ಪಯಣದಲ್ಲಿ ಪಯಣಿಗರಾಗಿರಿ
ಮತ್ತು ಪ್ರಭು ಕ್ರಿಸ್ತರ ಸೇವಾ ಕಾರ್ಯದಲ್ಲಿ ಪಾಲುಧಾರರಾಗಿರಿ.
ಆಗ ನಿಮ್ಮ ಜೀವನ ಈ ಧರೆಯಲ್ಲಿ ದೈವತ್ವ ಭರಿತವಾಗಿ ಕಂಗೊಳಿಸುವ
ಜೀವನವಾಗುತ್ತದೆ. ಈ ಸೇವಾ ಕಾರ್ಯದಲ್ಲಿ ಕೈ ಜೋಡಿಸಿ,
ಪ್ರೀತಿ, ಕರುಣೆ, ಅನುಕಂಪ ಎಂಬ
ಸದ್ಗುಣಗಳನ್ನು ಎದುರು ನೋಡುತ್ತಿರುವವರಿಗೆ ಆಶಾ ಕಿರಣಗಳಾಗಿರಿ.

**ವಿಭಿನ್ನರಾಗಿರಲು ಧೈರ್ಯಪಡಿರಿ!**


## ಸಂಪರ್ಕಿಸುವ ವಿಳಾಸ:

9902114850
9945330948

sspsnimmi@gmail.com
vasussps@gmail.com

www.sspsindia.com
www.worldssps.org

Sr Nirmala Mendonca, Convent of the Holy Spirit, S.O.S Post Office, Bannerghatta Road, Bangalore - 560076, Karnataka.



# ಪವಿತ್ರಾತ್ಮನ ಸೇವಕಿಯರ ಸಭೆ (ಎಸ್.ಎಸ್.ಪಿ.ಎಸ್)

**ಪ್ರಭು ಯೇಸು ಕ್ರಿಸ್ತರ ಅಖಿಲ ವಿಶ್ವ ಸುವಾರ್ತೆ ಪ್ರಚಾರದ ಅಂತರಾಷ್ಟ್ರೀಯ ಸಭೆ**

ಸದಾ ಕ್ರೀಯಾಶೀಲತೆಯಿಂದ ಕೂಡಿರುವ ಪವಿತ್ರಾತ್ಮನ ಸೇವಕಿಯರ ಸಭೆಯ ಪ್ರಪಂಚಕ್ಕೆ ನಿಮಗೆ ಆದರದ ಸ್ವಾಗತ. ಈ ಪವಿತ್ರ ಕನ್ಯಾ ಭಗಿನಿಯರ ಸಭೆಯನ್ನು ಡಿಸೆಂಬರ್ 8, 1889 ರಂದು, ದಾರ್ಶನಿಕಕಾರರಾದ ಸಂತ ಅರ್ನಾಲ್ಡ್ ಜಾನ್ಸನ್ ರವರು ನೆದರ್ಲ್ಯಾಂಡ್‌ನ ಸ್ಟೈಲ್ - ಎಂಬಲ್ಲಿ ಪ್ರಾರಂಭಿಸಿದರು. ಸಂತೋಷದಿಂದ ಪ್ರಭು ಯೇಸು ಕ್ರಿಸ್ತರ ಸುವಾರ್ತೆ ಪ್ರಚಾರದಲ್ಲಿ ಸಕ್ರಿಯವಾಗಿ ಭಾಗವಹಿಸುವುದು ಮತ್ತು ಯಾವುದೇ ಭಾಷೆ, ಕುಲ, ಧರ್ಮ ಇತ್ಯಾದಿಗಳ ತಾರತಮ್ಯವಿಲ್ಲದೆ ಎಲ್ಲಾ ಜನರೊಂದಿಗೆ ಬೆರೆತು ಕೆಲಸಮಾಡುವುದು ನಮ್ಮ ಆದ್ಯ ಕಾರ್ಯವಾಗಿದೆ. ನಾವು ಒಂದು ಸಮುದಾಯವಾಗಿ ಜೀವಿಸುತ್ತ, ಅಸಾಯಕ ಸ್ಥಿತಿಯಲ್ಲಿರುವ ಜನರ ಕೂಗಿಗೆ ಸ್ಪಂದಿಸುವುದರೊಂದಿಗೆ, ಮಾನವನ ದೈವೀ ಮುಖ ಛಾಯೆಯನ್ನು ಪ್ರಪಂಚಕ್ಕೆ ತೋರಿಸಲು ಪ್ರಯತ್ನಿಸುತ್ತಿದ್ದೇವೆ.



ನಾವು ನಮ್ಮ ಸಂಸ್ಥಾಪಕರ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ನಡೆಯುತ್ತೇವೆ

# ನಮ್ಮ ಸೇವೆಯ ಪಕ್ಷಿ ನೋಟ

ಹಿಂದುಳಿದ ವರ್ಗಗಳ ಶಿಕ್ಷಣ, ಆರೋಗ್ಯ ಹಾಗೂ ಸಾಮಾಜಿಕ ಸಬಲೀಕರಣದ ಕಡೆಗೆ ಆದ್ಯತೆ, ವೃದ್ಧರನ್ನು ನೋಡಿಕೊಳ್ಳುವುದು, ಹೆಚ್.ಐ.ವಿ/ಏಡ್ಸ್ ಪೀಡಿತ ಜನರ ಸೇವೆ ಮಾಡುವುದು, ವಿಕಲ ಚೇತನರ ಸೇವೆ, ಕಾರಾಗೃಹದಲ್ಲಿರುವ ಕೈದಿಗಳ ಭೇಟಿ ಹಾಗೂ ಬಂಧನ ಮುಕ್ತ ಮಾಡಲು ಸಲಹೆ ಮತ್ತು ನೆರವು, ಹೆಣ್ಣು ಮಕ್ಕಳ ಅಭಿವೃದ್ಧಿ, ಮಹಿಳೆಯರ ಸಬಲೀಕರಣ-ಗೃಹಕಾರ್ಮಿಕರ ಒಳಿತಿಗಾಗಿ ಸೇವೆ, ಮಹಿಳೆಯರಿಗೆ ಕಾನೂನು ಸಲಹೆಗಳ ನೆರವು, ಮತ್ತು ಮಾಧ್ಯಮಗಳ ಮುಖಾಂತರ ಕ್ರಿಸ್ತನ ಪ್ರೀತಿ ಸಾರುವುದು.

## ಆರೋಗ್ಯ ಸೇವೆ...




## ಶಿಕ್ಷಣ ಕ್ಷೇತ್ರ...






ಶಾಲೆಗಳು, ಕಾಲೇಜುಗಳು, ಶಿಶುವಿಹಾರ ಮತ್ತು ವಸತಿ ನಿಲಯಗಳ ಮೂಲಕ ಶಿಕ್ಷಣ

## ಆಧ್ಯಾತ್ಮಿಕ ನೆರವು...







ಯುವಕರ ಸಂಘಗಳು, ಮಹಿಳಾ ಘಟಕಗಳು, ಪ್ರಾರ್ಥನಾ ಕೂಟಗಳು, ಧರ್ಮೋಪದೇಶ, ಮನೆ ಭೇಟಿಗಳು, ಕಿರು ಕ್ರೈಸ್ತ ಸಮುದಾಯಗಳು

## ಸಾಮಾಜಿಕ ಕ್ಷೇತ್ರ...








- ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆದ್ಯತೆ
- ಯುವಜನತೆಯ ಸಬಲೀಕರಣ
- ಹೆಣ್ಣು ಮಕ್ಕಳ ಸಬಲೀಕರಣ- ಗೃಹ ಕಾರ್ಮಿಕರ ಒಳಿತಿಗಾಗಿ ಸೇವೆ,
- ಮಹಿಳೆಯರಿಗೆ ಕಾನೂನು ಸಲಹೆಗಳ ನೆರವು,
- ವೃದ್ಧಾಶ್ರಮಗಳು
- ಹೆಚ್.ಐ.ವಿ/ಏಡ್ಸ್ ಪೀಡಿತ ಜನರ ಸೇವೆ
- ವಿಕಲಚೇತನರ ಸೇವೆ

ವೈಯಕ್ತಿಕ ಆರೈಕೆ, ಕುಟುಂಬ ಸಮಾಲೋಚನೆ ಮತ್ತು ಕಾನೂನು ನೆರವು ಮೂಲಕ ಕಾರ್ಯತಂತ್ರದ ಮಧ್ಯಸ್ಥಿಕೆಗಳು

## ತರಬೇತಿ...






ಅಭ್ಯರ್ಥಿತನ, ಅಪೇಕ್ಷೆಯ ಹಂತ, ಪೂರ್ವ-ನೊವಿಶಿಯೇಟ್, ನೊವಿಶಿಯೇಟ್, ಜೂನಿಯರೇಟ್ ಮತ್ತು ನಿರಂತರ ತರಬೇತಿ.

## ಸುಸ್ಥಿರ ಅಭಿವೃದ್ಧಿಯ ಕಡೆಗೆ ಆದ್ಯತೆ...








- ಸೌರಶಕ್ತಿ ಬಳಕೆ
- ಜೈವಿಕ ಅನಿಲದ ಬಳಕೆ
- ಗಿಡಗಳನ್ನು ನೆಡುವುದು,
- ಮರಗಳನ್ನು ಉಳಿಸುವುದು
- ತ್ಯಾಜ್ಯ ವಸ್ತುಗಳ ನಿರ್ವಹಣೆ
- ಮಳೆ ನೀರಿನ ಕೊಯ್ಲು
- ಮಳೆ ನೀರಿನ ಸಂರಕ್ಷಣೆ
- ಸಾವಯವ ಗೊಬ್ಬರ ತಯಾರಿಕೆ
- ಪ್ಲಾಸ್ಟಿಕ್ ಬಳಕೆ ನಿರಾಕರಣೆ